# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತ ಗಂಗೋತ್ರಿ, ಮೈಸೂರು – 570006.**

ಸಂಖ್ಯೆ:ಕರಾಮುವಿ/ಪವಿ/5.1/ಪಅಶಾ/ಹ.ವಿ..ಪ/05/2026-27

ದಿನಾಂಕ:-21-09-2026

## ಪರೀಕ್ಷಾ ಅಧಿಸೂಚನೆ

**ವಿಷಯ:-** 2007-08ನೇ ಶೈಕ್ಷಣಿಕ ಸಾಲಿನಿಂದ 2014-15ನೇ ಶೈಕ್ಷಣಿಕ ಸಾಲಿನವರೆಗೆ ಹಾಗು 2018-19ನೇ ಶೈಕ್ಷಣಿಕ ಸಾಲಿನಿಂದ 2021-22ನೇ ಶೈಕ್ಷಣಿಕ ಸಾಲಿನವರೆಗೆ ಪ್ರವೇಶಾತಿ ಪಡೆದು ಅನುತ್ತೀರ್ಣರಾಗಿರುವ ಹಾಗು ಪರೀಕ್ಷೆ ತೆಗೆದುಕೊಂಡಿಲ್ಲದ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ ಸಿಬಿಸಿಎಸ್/ನಾನ್ ಸಿಬಿಸಿಎಸ್ (CBCS/NON-CBCS) ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಬರೆಯಲು ಮತ್ತೊಂದು ಭಾರಿ ಅವಕಾಶ ನೀಡುವ ಬಗೆಗೆ

**ಉಲ್ಲೇಖ:-** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 19.09.2026

*****

ವಿಶ್ವವಿದ್ಯಾನಿಲಯದಲ್ಲಿ 2007-08ನೇ ಶೈಕ್ಷಣಿಕ ಸಾಲಿನಿಂದ 2014-15ನೇ ಶೈಕ್ಷಣಿಕ ಸಾಲಿನವರೆಗೆ ಹಾಗು 2018-19ನೇ ಶೈಕ್ಷಣಿಕ ಸಾಲಿನಿಂದ 2021-22ನೇ ಶೈಕ್ಷಣಿಕ ಸಾಲಿನವರೆಗೆ ಪ್ರವೇಶಾತಿ ಪಡೆದು ವಿವಿಧ ಸ್ನಾತಕ/ಸ್ನಾತಕೋತ್ತರ **ನಾನ್ ಸಿಬಿಸಿಎಸ್** (NON-CBCS) ಕಾರ್ಯಕ್ರಮಗಳಲ್ಲಿ ಅನುತ್ತೀರ್ಣರಾಗಿರುವ ಹಾಗು ಕಾರಣಾಂತರಗಳಿಂದ ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳು ಮನವಿ ಪತ್ರವನ್ನು ಸಲ್ಲಿಸಿ ಪದವಿ ಪೂರ್ಣಗೊಳ್ಳದಿರುವ ಬಗ್ಗೆ ಮತ್ತೊಂದು ಭಾರಿ ಪರೀಕ್ಷೆಗೆ ಅವಕಾಶ ನೀಡುವಂತೆ ಕೋರಿರುವ ಹಿನ್ನೆಲೆಯಲ್ಲಿ ಶೈಕ್ಷಣಿಕ ಮಂಡಳಿ ಸಭೆಯ ನಿರ್ಣಯ ಹಾಗು ವ್ಯವಸ್ಥಾಪನ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಮಾನ್ಯ ಕುಲಪತಿಗಳು ಅನುಮೋದನೆ ಮೇರೆಗೆ ಸದರಿ ಸಾಲಿನಲ್ಲಿ ಅನುತ್ತೀರ್ಣರಾಗಿರುವ ಹಾಗು ಕಾರಣಾಂತರಗಳಿಂದ ಪರೀಕ್ಷೆ ತೆಗೆದುಕೊಂಡಿಲ್ಲದ ಸ್ನಾತಕ/ಸ್ನಾತಕೋತ್ತರ ವಾರ್ಷಿಕ ಕಾರ್ಯಕ್ರಮಗಳ ಸಿಬಿಸಿಎಸ್/**ನಾನ್ ಸಿಬಿಸಿಎಸ್ (CBCS/NON-CBCS)** ವಿದ್ಯಾರ್ಥಿಗಳಿಗೆ ಈ ಹಿಂದೆ ಪಾವತಿಸಿ ಕೊಂಡಂತೆ ಪರೀಕ್ಷಾ ಶುಲ್ಕ ಪಾವತಿಸಿಕೊಂಡು ಪರೀಕ್ಷೆ ನಡೆಸಲು ಪರೀಕ್ಷಾ ಅಧಿಸೂಚನೆಯನ್ನು ಹೊರಡಿಸಲಾಗಿದೆ.

- 2007-08ನೇ ಶೈಕ್ಷಣಿಕ ಸಾಲಿನಿಂದ 2020-2021ನೇ ಶೈಕ್ಷಣಿಕ ಸಾಲಿನವರೆಗೆ ಪ್ರವೇಶಾತಿ ಪಡೆದಿರುವ ಸ್ನಾತಕ ಕಾರ್ಯಕ್ರಮಗಳಾದ **ಬಿ.ಎ/ಬಿ.ಕಾಂ/ಬಿ.ಲಿಬ್.ಐ.ಎಸ್ಸಿ** ಪದವಿಗಳಲ್ಲಿ ಅನುತ್ತೀರ್ಣ/ ಪರೀಕ್ಷೆ ತೆಗೆದುಕೊಂಡಿಲ್ಲದ ಪ್ರಥಮ, ದ್ವಿತೀಯ, ಮತ್ತು ತೃತೀಯ ವರ್ಷದ ವಿದ್ಯಾರ್ಥಿಗಳು
- 2007-08ನೇ ಶೈಕ್ಷಣಿಕ ಸಾಲಿನಿಂದ 2021-2022ನೇ ಶೈಕ್ಷಣಿಕ ಸಾಲಿನವರೆಗೆ (ಜುಲೈ/ಜನವರಿ ಆವೃತ್ತಿ) ಪ್ರವೇಶಾತಿ ಪಡೆದಿರುವ **ಎಲ್ಲಾ ಎಂ.ಎ/ಎಂ.ಕಾಂ/ ಎಂ.ಲಿಬ್.ಐ.ಎಸ್ಸಿ/ಎಂ.ಬಿ.ಎ/ಎಲ್ಲಾ ಎಂ.ಎಸ್ಸಿ/ಎಲ್.ಎಲ್.ಎಂ** ಕಾರ್ಯಕ್ರಮದ ಪ್ರಥಮ ಮತ್ತು ದ್ವಿತೀಯ ವರ್ಷದ ಅನುತ್ತೀರ್ಣ/ ಪರೀಕ್ಷೆ ತೆಗೆದುಕೊಂಡಿಲ್ಲದ ವಾರ್ಷಿಕ/ಸೆಮಿಸ್ಟರ್ (ಮೊದಲನೆ ಸೆಮಿಸ್ಟರ್‌ನಿಂದ ನಾಲ್ಕನೇ ಸೆಮಿಸ್ಟರ್‌ವರೆಗೆ) ಕಾರ್ಯಕ್ರಮದ **ಸಿಬಿಸಿಎಸ್/ನಾನ್ ಸಿಬಿಸಿಎಸ್ (CBCS/NON–CBCS/)** ವಿದ್ಯಾರ್ಥಿಗಳು.

ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಮತ್ತು ಪಾವತಿಸಬೇಕಾಗಿರುವ ಶುಲ್ಕದ ವಿವರಗಳು ಈ ಕೆಳಕಂಡಂತಿದ್ದು, ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ **www.ksoumysuru.ac.in**ನಲ್ಲಿ ಪರೀಕ್ಷಾ ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಎಲ್ಲಾ ಅಗತ್ಯ ವಿವರಗಳೊಂದಿಗೆ ಭರ್ತಿಮಾಡಿ ಕಡ್ಡಾಯವಾಗಿ ಅಂತರ್ಜಾಲದ (Online) ಮೂಲಕವೇ ಸಲ್ಲಿಸುವುದು. ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಾಗ ಯಾವುದೇ ಅಡಚಣೆಗಳು ಎದುರಾದಲ್ಲಿ ಸಹಾಯವಾಣಿ ಸಂಖ್ಯೆ **8690544544** ಯನ್ನು ಸಂಪರ್ಕಿಸುವುದು.

| | |
|---|---|
| ಪರೀಕ್ಷಾ ಶುಲ್ಕ ಪಾವತಿಸುವ ಪ್ರಾರಂಭದ ದಿನಾಂಕ : | 21.09.2026 |
| ದಂಡ ಶುಲ್ಕವಿಲ್ಲದೆ ಪಾವತಿಗೆ ಮುಕ್ತಾಯ ದಿನಾಂಕ : | 30.09.2026 |
| ರೂ. 200/- ದಂಡ ಶುಲ್ಕದೊಂದಿಗೆ ಪಾವತಿಗೆ ಕೊನೆಯ ದಿನಾಂಕ : | 06.10.2026 |

**ಸದರಿ ಪರೀಕ್ಷೆಗಳನ್ನು ಅಕ್ಟೋಬರ್/ನವಂಬರ್ -2026ರ ಮಾಹೆಗಳಲ್ಲಿ ನಡೆಸಲಾಗುವುದು.**

ಪರೀಕ್ಷೆಯ ದಿನಾಂಕಗಳ ವೇಳಾಪಟ್ಟಿ ವಿಶ್ವವಿದ್ಯಾನಿಲಯದ ಜಾಲತಾಣ **www.ksoumysuru.ac.in**ದಲ್ಲಿ ಪ್ರಕಟಿಸಲಾಗಿದೆ

ಹಾಗು

ಪರೀಕ್ಷಾ ಕೇಂದ್ರ : ಮೈಸೂರು

## ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಪರೀಕ್ಷಾ ಶುಲ್ಕಗಳ ಕೋಷ್ಟಕ

### ಸ್ನಾತಕ/ ಸ್ನಾತಕೋತ್ತರ (**U.G/P.G**) ಕೋರ್ಸ್‌ಗಳು

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ಒಂದು ಪತ್ರಿಕೆಗೆ | ಎರಡು ಪತ್ರಿಕೆಗೆ | ಮೂರು ಪತ್ರಿಕೆಗೆ | ನಾಲ್ಕು ಪತ್ರಿಕೆಗೆ | ಐದು ಮತ್ತು ಅದಕ್ಕೂ ಹೆಚ್ಚಿನ ಪತ್ರಿಕೆಗಳಿಗೆ/ಪೂರ್ಣ ಪರೀಕ್ಷೆಗೆ |
|---|---|---|---|---|---|---|
| 01 | ಬಿ.ಎ/ಬಿ.ಕಾಂ | 1500 | 1700 | 2000 | 2500 | 3600 |
| 02 | ಬಿ.ಲಿಬ್.ಐ.ಎಸ್ಸಿ | 2000 | 2400 | 3000 | 3600 | 4800 |
| 02 | ಎಂ.ಎ/ಎಂ.ಕಾಂ | 2000 | 2500 | 3000 | 4000 | 5100 |
| 03 | ಎಂ.ಲಿಬ್.ಐ.ಎಸ್ಸಿ | 2000 | 2400 | 3000 | 3600 | 4800 |
| 04 | ಎಂ.ಬಿ.ಎ (ಸೆಮಿಸ್ಟರ್) | 2000 | 2500 | 3000 | 4000 | 5100 |
| 05 | ಎಲ್ಲಾ ಎಂ.ಎಸ್ಸಿ ಪದವಿಗಳು (ಸೆಮಿಸ್ಟರ್) | 2000 | 3000 | 4500 | 6000 | 8400 |
| 06 | ಎಲ್.ಎಲ್.ಎಂ (ಸೆಮಿಸ್ಟರ್) | 2000 | 3000 | 4500 | 6000 | 8400 |

### ವಿದ್ಯಾರ್ಥಿಗಳಿಗೆ ಸೂಚನೆಗಳು

1. ವಿದ್ಯಾರ್ಥಿಗಳು ಕಡ್ಡಾಯವಾಗಿ ಮೈಸೂರು ಪರೀಕ್ಷಾ ಕೇಂದ್ರಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ.
2. ವಿದ್ಯಾರ್ಥಿಯು ಆನ್‌ಲೈನ್ ಮೂಲಕವೇ ಶುಲ್ಕವನ್ನು ಪಾವತಿಸಬೇಕು ಹಾಗೂ ಪಾವತಿಸಿದ ಅರ್ಜಿಯ ಒಂದು ಪ್ರತಿಯನ್ನು ಹೊಂದಿರತಕ್ಕದ್ದು.
3. ವಿವಿ ನಿಲಯಕ್ಕೆ ನೇರವಾಗಿ / ಅಂಚೆ ಮೂಲಕ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
4. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
5. ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಆಯಾಯ ವರ್ಷದ ಪಠ್ಯಕ್ರಮಕ್ಕೆ ಅನುಗುಣವಾಗಿ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು.
6. ವಿದ್ಯಾರ್ಥಿಗಳು ತಮ್ಮ ಕಾರ್ಯಕ್ರಮಗಳ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಪ್ರವೇಶಾತಿ ಪತ್ರಗಳನ್ನು (Hall Ticket) ಪರೀಕ್ಷೆಗಳು ಪ್ರಾರಂಭವಾಗುವ ಎರಡು ದಿನಗಳ ಮುಂಚೆ ವಿ.ವಿ. ನಿಲಯದ ಜಾಲತಾಣ **www.ksoumysuru.ac.in** ದಿಂದ ಪಡೆಯಬಹುದಾಗಿದೆ.
7. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್ ತರುವುದು ದುರ್ನಡತೆ (**Malpractice**) ಯಾಗುತ್ತದೆ. ಅಂತಹ ವಿದ್ಯಾರ್ಥಿಗಳ ವಿರುದ್ಧ ಕ್ರಮ ಜರುಗಿಸಲಾಗುತ್ತದೆ.
8. **ವಿಶೇಷ ಸೂಚನೆ: ವಿಶ್ವವಿದ್ಯಾನಿಲಯವು ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರೀಕ್ಷೆಗೆ ತರುವುದು.**
9. ಸಂಶೋಧನ ಪ್ರಬಂಧ ಮತ್ತು ಮೌಖಿಕ ಪರೀಕ್ಷೆ/ಪ್ರಾಯೋಗಿಕ ಪರೀಕ್ಷೆಯ ಬಗೆಗೆ ಸಂಬಂಧಿಸಿದ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸುವುದು.

ಕುಲಸಚಿವ(ಪರೀಕ್ಷಾಂಗ)

ಪ್ರತಿಗಳು.

1. ಮಾನ್ಯ ಕುಲಪತಿಗಳ ವಿಶೇಷ ಕರ್ತವ್ಯ ಅಧಿಕಾರಿಗಳು ಕರಾಮುವಿ, ಮೈಸೂರು.
2. ಮಾನ್ಯ ಕುಲಸಚಿವರ ಆಪ್ತಸಹಾಯಕರು, ಕರಾಮುವಿ, ಮೈಸೂರು.
3. ಡೀನ್(ಶೈಕ್ಷಣಿಕ),ಕರಾಮುವಿ,ಮೈಸೂರು.
4. ಹಣಕಾಸು ಅಧಿಕಾರಿಗಳು, ಕರಾಮುವಿ,
5. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
6. ಮುಖ್ಯಸ್ಥರು ಎಲ್ಲಾ ಅಧ್ಯಯನ ವಿಭಾಗಗಳು, ಕರಾಮುವಿ, ಮೈಸೂರು.
7. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು, ಕರಾಮುವಿ.
8. ನೋಡೆಲ್ ಅಧಿಕಾರಿಗಳು, ವೆಬ್‌ಸೈಟ್ ನಿರ್ವಹಣೆ, ಕರಾಮುವಿ. ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸುವುದು.
9. ಉಪಕುಲಸಚಿವ/ಸಹಾಯಕ ಕುಲಸಚಿವರು/ಅಧೀಕ್ಷಕರು, ಕರಾಮುವಿ, ಮೈಸೂರು.
10. ಸಂಯೋಜನಾಧಿಕಾರಿಗಳು, ಕಲಿಕಾರ್ಥಿಗಳ ಕಲ್ಯಾಣ ಕೇಂದ್ರ, ಕರಾಮುವಿ, ಮೈಸೂರು
11. ಕಚೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.